ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಮುಖ್ಯ ಆಯುಕ್ತರು ರವರ ಕಛೇರಿ, ನರಸಿಂಹರಾಜ ಚೌಕ, ಬೆಂಗಳೂರು-560002.

ಸಂಖ್ಯೆ: ಬಿಬಿಎಂಪಿ/ಮು.ಆ/ಪಿ.ಆರ್/145/2021-22 ದಿನಾಂಕ: 8/9/2021

ರವರಿಗೆ,
ಮಾನ್ಯ ಅಪರ ಮುಖ್ಯ ಕಾರ್ಯದರ್ಶಿಗಳು,
ಆಧಿಕಾರಯುಕ್ತ ಸಮಿತಿ,
ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ,
ಬೆಂಗಳೂರು-560001.

ಮಾನ್ಯರೇ,

ವಿಷಯ:- 2018-19 ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿ ದಿನಾಂಕ: 20.09.2019 ರ ಸರ್ಕಾರದ ಆದೇಶದಲ್ಲಿ ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆ ಅನುದಾನದಲ್ಲಿ ಕೈಗೊಳ್ಳಲು ಉದ್ದೇಶಿಸಿರುವ ಕಾಮಗಾರಿಯ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಹಾಗೂ ಟೆಂಡರ್ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ:- 1. ಸರ್ಕಾರದ ಪತ್ರ ಸಂಖ್ಯೆ: ನಅಇ 375 ಎಂಎನ್‌ಪೈ 2019 ದಿನಾಂಕ: 20.09.2019.

****

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಕೆಳಕಂಡ ಕಾಮಗಾರಿಗೆ ಉಲ್ಲೇಖ (1) ರ ಸರ್ಕಾರದ ಪತ್ರ ಸಂಖ್ಯೆ: ನಅಇ 375 ಎಂಎನ್‌ಪೈ 2019 ದಿನಾಂಕ: 20.09.2019 ರಲ್ಲಿ ಅನುಮೋದನೆಯಾಗಿರುವ ಕ್ರಿಯಾಯೋಜನೆಯ **ಅನುಬಂಧ-2** ರ ಕ್ರಮ ಸಂಖ್ಯೆ **754** ರಲ್ಲಿ ಅನುದಾನ ಲಭ್ಯವಿರುತ್ತದೆ. ಯೋಜನೆಗಳನ್ನು ಅನುಷ್ಠಾನಗೊಳಿಸಲು ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಿದ್ದು, ಟೆಂಡರ್‌ಗಳ ತಾಂತ್ರಿಕ ಮತ್ತು ಆರ್ಥಿಕ ಮೌಲ್ಯಮಾಪನ ಹಾಗೂ ದರಸಂಧಾನವನ್ನು ನಡೆಸಲಾಗಿರುತ್ತದೆ. ತಾಂತ್ರಿಕ ಮತ್ತು ಆರ್ಥಿಕ ಮೌಲ್ಯಮಾಪನದ ನಡವಳಿಯ ಪ್ರತಿಗಳನ್ನು ಈ ಪತ್ರದ ಜೊತೆ ಲಗತ್ತಿಸಿದ್ದು, ಯೋಜನೆಗಳ ಅಂದಾಜು ಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಮತ್ತು ಸಂಧಾನಿತ ಟೆಂಡರ್‌ಗಳಿಗೆ ಅನುಮೋದನೆ ಕೋರಿದೆ. ವಿವರಗಳು ಈ ಕೆಳಕಂಡಂತಿರುತ್ತವೆ.

<u>ವಿಷಯ ಸಂಖ್ಯೆ:- 01</u>

Name of the Work :-	**Redesign and Upgrading of existing Musicle Fountain interfaced with multimedia based laser and video projection on Aqua Screen at J.P.Park ward no 17 under PACKAGE-2019-20 RRN-DIV-(08)**

ಕ್ರ. ಸಂ	ಸಂಕ್ಷಿಪ್ತ ವಿವರ	
1	ಅಂದಾಜು ಮೊತ್ತ	ರೂ.1000.00 ಲಕ್ಷಗಳು
2	ದರ ಪಟ್ಟಿ ಅಳವಡಿಕೆ	ಲೋಕೋಪಯೋಗಿ ಇಲಾಖೆಯ ಬೆಂಗಳೂರು ವೃತ್ತದ 2018-19ನೇ ಸಾಲಿನ ಚಾಲ್ತಿ ದರಗಳು

ಕ್ರ. ಸಂ	ಸಂಕ್ಷಿಪ್ತ ವಿವರ	
3	ಲೆಕ್ಕ ಶೀರ್ಷಿಕೆ	ಪಿ - 3744 CM Navanagarothanna
4	ಕರಡು ಟೆಂಡರ್ ಅನುಮೋದನೆ	ಮುಖ್ಯ ಅಭಯಂತರರು, ರಾಜರಾಜೇಶ್ವರಿನಗರ ವಲಯ
5	ಟೆಂಡರ್‌ಗಿಟ್ಟ ಮೊತ್ತ	ರೂ. 8,35,95,778.15
6	ಟೆಂಡರ್ ಪ್ರಕಟಣೆ ಸಂಖ್ಯೆ	No. RRND/EE/Tend/03/2021-22 Date: 29.06.2021
7	ದಿನ ಪತ್ರಿಕೆಗಳಲ್ಲಿ ಪ್ರಕಟಣೆ	ವಿಜಯ ಕರ್ನಾಟಕ ಮತ್ತು ದಿ ಹಿಂದೂ ದಿನಾಂಕ: 01.07.2021
8	ಟೆಂಡರ್ ಸಲ್ಲಿಕೆ ಅಂತಿಮ ದಿನಾಂಕ	22.07.2021
9	ಟೆಂಡರ್ ಪದ್ಧತಿ	ಟ್ವಿ ಲಕೋಟೆ ಪದ್ಧತಿ
10	ಉಪಯೋಗಿಸಿದ ಸ್ಟಾಂಡರ್ಡ್ ಬಿಡ್ ಡಾಕ್ಯೂಮೆಂಟ್	KTPP Standard Bid Document KW-04
11	ಇ-ಪ್ರಕ್ಯೂರ್ ಮೆಂಟ್ ಇಂಡೆಂಟ್ ನಂ	BBMP/2021-22/OW/WORK_INDENT47783

ಮೇಲ್ಕಂಡ ಕಾಮಗಾರಿಗೆ 2018-19ನೇ ಸಾಲಿನ ಆಯವ್ಯಯದಲ್ಲಿ ಘೋಷಿಸಿ ಒದಗಿಸಿರುವ ಅನುದಾನದಲ್ಲಿ ಕೈಗೊಳ್ಳಲ್ಲು ಉದ್ದೇಶಿಸಿ ಸರ್ಕಾರದ ಆದೇಶ ಸಂಖ್ಯೆ: **ನಅಇ 375 ಎಂಎನ್‌ಪೈ 2018** ಬೆಂಗಳೂರು ದಿನಾಂಕ: 20.9.2019 ರಂತೆ, ಅನುಮೋದಿಸಿದ್ದ ಮುಖ್ಯಮಂತ್ರಿಗಳ ನವನಗರೋತ್ಥಾನ ಯೋಜನೆಯಡಿ ಅನುಮೋದನೆಯಾಗಿರುವ ಕ್ರಿಯಾಯೋಜನೆಯ **ಅನುಬಂಧ-2** ರ ಕ್ರಮ ಸಂಖ್ಯೆ 754 ರಲ್ಲಿ ರೂ. 1000.00 ಲಕ್ಷಗಳ ಅನುದಾನ ಒದಗಿಸಲಾಗಿರುತ್ತದೆ. ಟೆಂಡರ್ ಪ್ರಕಟಣೆ ವಿವರವು ಮೇಲ್ಕಂಡ ಕೋಷ್ಟಕದಲ್ಲಿ ವಿವರಿಸಿರುವಂತಿದ್ದು, ಟ್ವಿ-ಲಕೋಟೆ ತಾಂತ್ರಿಕ ಟೆಂಡರ್‌ನಲ್ಲಿ ಗುತ್ತಿಗೆದಾರರು ಸಲ್ಲಿಸಿರುವ ದಾಖಲೆಗಳ ಅನ್ವಯ ದಿನಾಂಕ: 12.08.2021 ರ ತಾಂತ್ರಿಕ ಮೌಲ್ಯಮಾಪನ/ಆರ್ಥಿಕ ಮೌಲ್ಯಮಾಪನ ಮತ್ತು ದರ ಸಂಧಾನ ಸಮಿತಿ ಸಭೆಯ ವಿಷಯ ಸಂಖ್ಯೆ: 01 ರ ತೀರ್ಮಾನದಂತೆ ಆರ್ಥಿಕ ಬಿಡ್‌ನ್ನು ದಿನಾಂಕ: 17.08.2021 ರಂದು ತೆರೆಯಲಾಗಿದ್ದು ವಿವರಗಳು ಈ ಕೆಳಕಂಡಂತಿರುತ್ತದೆ.

ಕ್ರ. ಸಂ	ತಾಂತ್ರಿಕ ಮೌಲ್ಯಮಾಪನದಲ್ಲಿ ಅರ್ಹರಾದ ಗುತ್ತಿಗೆದಾರರು	ಟೆಂಡರ್‌ಗಿಟ್ಟ ಮೊತ್ತ (2018-19ನೇ ಸಾಲಿನ ದರಪಟ್ಟಿ ಹಾಗೂ ಪರಿಷ್ಕೃತ ದರಗಳಂತೆ)	ಟೆಂಡರ್‌ನಲ್ಲಿ ನಮೂದಿಸಿರುವ ಮೊತ್ತ ರೂ.ಗಳಲ್ಲಿ (2018-19ನೇ ಸಾಲಿನ ದರಪಟ್ಟಿ ಹಾಗೂ ಪರಿಷ್ಕೃತ ದರಗಳಂತೆ)	ಟೆಂಡರ್‌ಗಿಟ್ಟ ಮೊತ್ತಕ್ಕೆ (2018-19ನೇ ಸಾಲಿನ ದರಪಟ್ಟಿ ಹಾಗೂ ಪರಿಷ್ಕೃತ ದರಗಳಂತೆ) ಹೋಲಿಸಿದಾಗ ಶೇಕಡಾವಾರು	ಷರಾ
1	ಶ್ರೀ. ರಾಜೇಶ್ ಎಂ (ಶ್ರೀ ನಂಜುಂಡೇಶ್ವರ ಕನ್‌ಸ್ಟ್ರಕ್ಷನ್)	ರೂ. 8,35,95,778.15	ರೂ. 9,36,27,354.72	ಶೇ. 12.00% ಹೆಚ್ಚು	L-1
2	ಶ್ರೀ. ಪುರುಷೋತ್ತಮ್ ರಾಜು. ಎನ್ (ನಾದಿಂಪಲ್ಲಿ ಪುರುಷೋತ್ತಮ್ ರಾಜು, ಎನ್.ಪಿ.ಆರ್ ಇನ್‌ಫ್ರಾಟೆಕ್)		ರೂ. 9,61,28,468.13	ಶೇ. 14.99% ಹೆಚ್ಚು	L-2
3	ಶ್ರೀ. ದಾಮೋದರ್ ಮಂಜುನಾಥ್ (ಕೆ. ದಾಮೋದರ್ & ಕೋ.)		ರೂ. 9,82,31,315.70	ಶೇ. 17.51% ಹೆಚ್ಚು	L-3

ಎಲ್-1 ಬಿಡ್‌ದಾರರಾದ **ಶ್ರೀ. ರಾಜೇಶ್ ಎಂ (ಶ್ರೀ ನಂಜುಂಡೇಶ್ವರ ಕನ್‌ಸ್ಟ್ರಕ್ಷನ್)** ರವರು ನಮೂದಿಸಿರುವ ಮೊತ್ತ **ರೂ. 9,36,27,354.72** (12% ಜಿ.ಎಸ್.ಟಿ ಹೊರತುಪಡಿಸಿ) ಗಳನ್ನು ಮಂಜೂರಾದ ದರಗಳಿಗೆ ಹೋಲಿಸಿದಾಗ **ಶೇ. 12.00%** ರಷ್ಟು ಹೆಚ್ಚಿನ ದರವಾಗಿದ್ದ ಹಿನ್ನೆಲೆಯಲ್ಲಿ ಎಲ್-1 ಬಿಡ್‌ದಾರರಾದ **ಶ್ರೀ.ರಾಜೇಶ್ ಎಂ (ಶ್ರೀ ನಂಜುಂಡೇಶ್ವರ ಕನ್‌ಸ್ಟ್ರಕ್ಷನ್)** ರವರೊಂದಿಗೆ ದರಸಂಧಾನ ಕೈಗೊಂಡು ಟೆಂಡರ್‌ನಲ್ಲಿ ನಮೂದಿಸಿರುವ ದರಗಳನ್ನು ಕಡಿಮೆ ಮಾಡಲು ಸೂಚಿಸಿದ್ದರ ಮೇರೆಗೆ ಬಿಡ್‌ದಾರರು ಹಾಲಿ ನಮೂದಿಸಿರುವ **ರೂ. 9,36,27,354.72** (12% ಜಿ.ಎಸ್.ಟಿ ಹೊರತುಪಡಿಸಿ) ಗಳ ಬದಲಾಗಿ **ರೂ. 8,77,58,847/-** (12% ಜಿ.ಎಸ್.ಟಿ ಹೊರತುಪಡಿಸಿ) ಗಳಿಗೆ ಸಂಧಾನಿತ ದರ ಸಲ್ಲಿಸಿರುತ್ತಾರೆ. ಸದರಿ ಸಂಧಾನಿತ ದರಮೊತ್ತ **ರೂ. 8,77,58,847/-** (12% ಜಿ.ಎಸ್.ಟಿ ಹೊರತುಪಡಿಸಿ) ಗಳನ್ನು ಮಂಜೂರಾದ ದರಗಳಿಗೆ (2018-19ನೇ ಸಾಲಿನ ದರಪಟ್ಟಿ ಹಾಗೂ ಪರಿಷ್ಕೃತ ದರಗಳಂತೆ) ಹೋಲಿಸಿದಾಗ **ಶೇ.4.98%** ರಷ್ಟು ಹೆಚ್ಚುವರಿ ದರಗಳಾಗಿದ್ದು, ಸಂಧಾನಿತ ಟೆಂಡರ್ ಬಗ್ಗೆ ತೀರ್ಮಾನ ಕೈಗೊಳ್ಳಲು ಸರ್ಕಾರದ ಮಟ್ಟದಲ್ಲಿ ರಚಿತವಾಗಿರುವ ಅಧಿಕಾರಯುಕ್ತ ಸಮಿತಿಯ ಮುಂದೆ ಮಂಡಿಸುವುದು ಸೂಕ್ತವೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತು.

ಈ ಹಿನ್ನೆಲೆಯಲ್ಲಿ ಮೇಲ್ಕಂಡ ಕಾಮಗಾರಿಯ ಅಂದಾಜುಮೊತ್ತಕ್ಕೆ ಆಡಳಿತಾತ್ಮಕ ಅನುಮೋದನೆ ಮತ್ತು ಸಂಧಾನಿತ ಟೆಂಡರ್ ಮೊತ್ತಕ್ಕೆ ಅನುಮೋದನೆಗಾಗಿ ಸರ್ಕಾರದಿಂದ ರಚಿತವಾಗಿರುವ ಅಧಿಕಾರಯುಕ್ತ ಸಮಿತಿಯ ಮುಂದೆ ಪ್ರಸ್ತಾವನೆ ಮಂಡಿಸಿದೆ.

ವಂದನೆಗಳೊಂದಿಗೆ,

ತಮ್ಮ ವಿಶ್ವಾಸಿ,

ಮುಖ್ಯ ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.